ಕೇಂದ್ರದಲ್ಲಿ ಸುಮಾರು ೪೦-೫೦ ಲೋಡು ಹುಲ್ಲು ಕೊಳೆತು ನಾರುತ್ತಿದೆ. ಕಂಪೀಹಳ್ಳಿಯಲ್ಲಿ ಕೂಡ ಸುಮಾರು ೭೦-೮೦ ಲೋಡು ಹುಲ್ಲು ಹಾಗೆ ಬಿದ್ದಿದ್ದು ಹಾಳಾಗಿ ಹೋಗಿದೆ. ಈ ವಿಷಯವನ್ನು ಅಧಿಕಾರಿಗಳು ಸರ್ಕಾರಕ್ಕೆ ತಿಳಿಸಿದ್ದಾರೋ ಇಲ್ಲವೋ ಎನ್ನುವ ಬಗ್ಗೆ ಉತ್ತರ ಬೇಕು.

ಶ್ರೀ ವೀರಣ್ಣ.—ಸ್ವಾಮಿ, ಮಾನ್ಯ ಸದಸ್ಯರ ಪ್ರಶ್ನೆ ಸ್ಪಷ್ಟವಾಗಿದ್ದು ಅದಕ್ಕೆ ಉತ್ತರ ಕೊಡಲಾಗಿದೆ. ಇರತಕ್ಕ ಮೇವನ್ನು ರೈತರಿಗೆ ಅವಶ್ಯಕತೆ ಇದೆಯೋ ಅವರಿಗೆ ಕೊಡುವುದಕ್ಕೆ ತೀರ್ಮಾನ ಮಾಡಲಾಗುವುದು.

ಶ್ರೀ ಬಿ. ವಿ. ಕರಿಗೌಡ.—ಸ್ವಾಮಿ, ಕೊಳೆತು ಹೋಗಿರುವ ಹುಲ್ಲಿನ ವಿಚಾರದಲ್ಲಿ ಯಾರ ಮೇಲೆ ಜವಾಬ್ದಾರಿ ಹೊರಿಸುತ್ತೀರಿ ? ಮೇವು ಬೆಳೆಯಲಿಕ್ಕೆ ದುಡ್ಡು ತೆಗೆದುಕೊಂಡಿರುವ ವ್ಯಕ್ತಿಗಳಿಗೆ ಜಮೀನು ಇಲ್ಲ. ನೀರಾವರಿ ಅಶ್ರಯ ಇಲ್ಲ, ಬಿ.ಡಿ.ಓ. ಮತ್ತು ತಾಲ್ಲೂಕು ಆಫೀಸಿನಲ್ಲಿ ಬೇಕಾದಷ್ಟು ಅವ್ಯವಹಾರಗಳು ನಡೆದಿದೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಕೇಳುತ್ತೇನೆ ?

ಶ್ರೀ ವೀರಣ್ಣ.—ನಿರ್ದಿಷ್ಟವಾಗಿರತಕ್ಕ ದೂರು ಕೊಟ್ಟರೆ ವಿಚಾರಣೆ ಮಾಡಿಸುತ್ತೇನೆ.

ಅಧ್ಯಕ್ಷರು.—ವಿಚಾರಣೆ ಮಾಡಿ, ಆಕ್ಷನ್ ತೆಗೆದುಕೊಳ್ಳುತ್ತೇನೆಂದು ಹೇಳಿ.

ಶ್ರೀ ವೀರಣ್ಣ —ನಿರ್ದಿಷ್ಟವಾಗಿ ಹೇಳಿದರೆ, ಸೂಕ್ತ ಕ್ರಮ ತೆಗೆದುಕೊಂಡು ವಿಚಾರಣೆ ಮಾಡಿಸುತ್ತೇನೆ.

ಶ್ರೀ ಬಿ. ವಿ ಕರಿಗೌಡ.—ಸ್ವಾಮಿ, ನಾನು ನಿರ್ದಿಷ್ಟವಾಗಿಯೇ ಹೇಳುತ್ತಿದ್ದೇನೆ. ಸಂಗ್ರಹ ಮಾಡಿರತಕ್ಕ ಹಲ್ಲು ಧೂಳಾಗಿ ಹೊಗುತ್ತಿದೆ. ಒಳಗೆ ಕೂಡ ಹಾಕುವುದಕ್ಕೆ ಆಗುವುದಿಲ್ಲ. ಬಿ.ಡಿ.ಓ. ಮತ್ತು ತಾಲ್ಲೂಕು ಆಫೀಸಿನಲ್ಲಿ ಯಾರುಯಾರಿಗೆ ದುಡ್ಡು ಕೊಟ್ಟಿದ್ದಾರೆ ಎನ್ನುವ ಬಗ್ಗೆ ವರದಿ ತರಿಸಿಕೊಂಡು ವಿಚಾರಣೆ ಮಾಡುತ್ತೀರಾ ?

ಶ್ರೀ ವೀರಣ್ಣ —ವಿಚಾರಣೆ ಮಾಡಿಸುತ್ತೇನೆ.

ಸಂಡೂರಿನಲ್ಲಿ ಸಾಕಷ್ಟು ವಿದ್ಯಾರ್ಥಿನಿಲಯಗಳ ಸೌಲಭ್ಯವಿಲ್ಲದಿರುವುದು

೨೬೯. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಡೂರಿನಲ್ಲಿ ಮೂರು ಕಾಲೇಜುಗಳಿದ್ದರೂ ಅಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯವಿಲ್ಲದೇ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ವಿದ್ಯಾರ್ಥಿನಿಲಯವನ್ನು ಯಾವಾಗ ಸ್ಥಾಪಿಸಲಾಗುವುದು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ

ಶ್ರೀ ಯು. ಭೂಪತಿ —ಸ್ವಾಮಿ, ಸಂಡೂರಿನಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು ಎರಡು ಜೂನಿಯರ್ ಕಾಲೇಜುಗಳು ಇವೆ. ನಂದಿಹಳ್ಳಿಯಲ್ಲಿ ಒಂದು ಸ್ನಾತಕೋತ್ತರ ಕಾಲೇಜು ಇದೆ. ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಹರಿಜನ ಗಿರಿಜನ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯ ಅಲ್ಲಿ ಇರುವುದಿಲ್ಲ ನಿನ್ನೆ ತಾನೆ ಮಾನ್ಯ ಸಚಿವರು ಸದಸದಲ್ಲಿ ಉತ್ತರ ಕೊಡುತ್ತಾ ಹರಿಜನ ಗಿರಿಜನ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಿಗಾಗಿ ೫ ಕೋಟಿ ರೂಪಾಯಿಗಳನ್ನು ನಿಗದಿಮಾಡಲಾಗಿದೆಯೆಂದು ತಿಳಿಸಿದ್ದಾರೆ. ಈ ಹಣದಲ್ಲಿ ಸಂಡೂರಿಗೆ ಒಂದು ಹರಿಜನ ಗಿರಿಜನ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಹಾಸ್ಟೆಲುಗಳನ್ನು ಕಟ್ಟಿಸುವ ಬಗ್ಗೆ ಸರ್ಕಾರ ಒಂದು ಯೋಜನೆಯನ್ನು ರೂಪಿಸಿದೆ. ಮುಂದಿನ

ವರ್ಷದಿಂದ ಮೂರು ವರ್ಷಗಳ ಅವಧಿಯಲ್ಲಿ ವರ್ಷಕ್ಕೆ ೫ ಕೋಟಿ ರೂಪಾಯಿಗಳಂತೆ ಹಂತಹಂತವಾಗಿ ಹಾಸ್ಟೆಲುಗಳ ಕಟ್ಟಡವನ್ನು ಕಟ್ಟಿಸುವುದಕ್ಕೆ ಯೋಜನೆ ಹಾಕಿಕೊಳ್ಳಲಾಗಿದೆ ಈ ಯೋಜನೆಯಲ್ಲಿ ಸಂಡೂರಿನ ಸಮಸ್ಯೆಯನ್ನು ಬಗೆಹರಿಸಲಾಗುವುದು.

ಶ್ರೀ ಯು. ಭೂಪತಿ.—ಸ್ವಾಮಿ, ಮುಂದಿನ ವರ್ಷವಾದರೂ ಸಂಡೂರಿಗೆ ಹಾಸ್ಟೆಲ್ ಕೊಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಹಾಸ್ಟೆಲು ಮಂಜೂರು ಮಾಡಬೇಕಾದರೆ ಜಿಲ್ಲಾಧಿಕಾರಿಯವರ ಶಿಫಾರಸ್ಸು ಮತ್ತು ಅವರ ಅಭಿಪ್ರಾಯ ತೆಗೆದುಕೊಂಡು ಕೊಡಲಾಗುವುದು. ನಾನೂ ಕೂಡ ಖುದ್ದು ಬಂದು ನೋಡಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಯು. ಭೂಪತಿ.—ಫ್ರೀ ಮೆಟ್ರಿಕ್ ಹಾಸ್ಟೆಲುಗಳು ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಎರಡು ಹಾಸ್ಟೆಲುಗಳು ಇವೆ. ಬಿ.ಸಿ.ಎಂ. ಸಮುದಾಯದವರಿಗೆ ಇಲ್ಲ. ಎಸ್.ಸಿ. ಎಸ್.ಟಿ. ಹಾಸ್ಟೆಲ್‌ನಲ್ಲಿ ಈ ಹುಡುಗರಿಗೂ ಸ್ಥಳಾವಕಾಶ ಕೊಟ್ಟಿರುವುದರಿಂದ ವಾಸ ಮಾಡುವುದಕ್ಕೆ ಬಹಳ ತೊಂದರೆಯಾಗಿದೆ. ಬಿ.ಸಿ.ಎಂ. ಹಾಸ್ಟೆಲ್ ಕಟ್ಟಡದ ವಿಚಾರದಲ್ಲಿ ಏನಾದರೂ ಕ್ರಮತೆಗೆದುಕೊಳ್ಳುತ್ತೀರಾ ?

ಶ್ರೀ ಜಿ. ಬಸವಣಪ್ಪ.—ನಾನು ಸಮಾಜ ಕಲ್ಯಾಣ ಮಂತ್ರಿಯಾದ ಮೇಲೆ ರಾಜ್ಯದಲ್ಲಿ ಎಷ್ಟು ಹಾಸ್ಟೆಲುಗಳ ಅವಶ್ಯಕತೆ ಇದೆ ಎನ್ನುವ ಬಗ್ಗೆ ಮಾಹಿತಿ ತೆಗೆದುಕೊಂಡಿದ್ದೇನೆ. ಅದರಂತೆ ೬೦೦ ಫ್ರೀ ಮೆಟ್ರಿಕ್ ಹಾಸ್ಟೆಲುಗಳು ೧೦೦ ಪೂರ್ವ ಮೆಟ್ರಿಕ್ ಹಾಸ್ಟೆಲುಗಳ ಅವಶ್ಯಕತೆ ಇದೆ. ಅದರ ಪ್ರಕಾರ ೧೦೦ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ, ೫೦ ವಿದ್ಯಾರ್ಥಿನಿಯರಿಗೆ ಅನುಕೂಲವಾಗುವಂತೆ ಕಟ್ಟಡಗಳನ್ನು ಕಟ್ಟಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ರಾಜ್ಯದಲ್ಲಿ ಒಟ್ಟು ೧೫೫ ಕಟ್ಟಡಗಳು ವಿವಿಧ ಹಂತದಲ್ಲಿದ್ದು ಇನ್ನು ೧೨ ತಿಂಗಳಲ್ಲಿ ಇವುಗಳನ್ನು ಮುಗಿಸಬೇಕೆಂದು ಸೂಚಿಸಿದ್ದೇನೆ. ಸರಳ ಪಾಗಿರತಕ್ಕ ಡಿಸೈನ್ ಮಾಡುವುದರ ಜೊತೆಗೆ, ಐ ಆರ್.ಡಿ.ಪಿ., ಆರ್.ಎಲ್.ಇ.ಜಿ.ಪಿ. ಡಿಸ್ಟ್ರಿಕ್ಟ್ ಸಬ್ ಪ್ಲಾನ್ ಹಾಗೂ ಮುನಿಸಿಪಲ್ ಫಂಡ್‌ನಿಂದ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಯೋಜನೆ ಹಾಕಿಕೊಳ್ಳಲಾಗಿದೆ. ಇನ್ನು ನಾಲ್ಕು ವರ್ಷಗಳಲ್ಲಿ ಸಮಗ್ರ ಬದಲಾವಣೆ ತರಬೇಕೆಂಬುದು ನಮ್ಮ ಗುರಿಯಾಗಿದೆ. ಆ ದಿಕ್ಕಿನಲ್ಲಿ ಈಗಾಗಲೇ ಕೆಲಸವನ್ನು ಪ್ರಾರಂಭ ಮಾಡಲಾಗಿದೆ.

ಬಂಗಾರು ಪೇಟೆಯಲ್ಲಿರುವ ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರಿ ಸಂಘ

೬೭೯. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ). ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೋಲಾರ ಜಿಲ್ಲೆ ಬಂಗಾರಪೇಟೆಯಲ್ಲಿರುವ ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದವರು ಅದೇ ತಾಲ್ಲೂಕು ಕಸಬಾ ಹೋಬಳಿ ದೊಡ್ಡ ಅಂಕಂಡಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. ೩೯ರಲ್ಲಿ ೧೦ ಎಕರೆ ಜಮೀನನ್ನು ಮಂಜೂರು ಮಾಡಿ ಕೊಡಬೇಕೆಂದು ಕೋರಿ ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಈ ಬಗ್ಗೆ ಸಂಬಂಧಪಟ್ಟ ತಹಸೀಲ್ದಾರ್‌ರವರು ದಾಖಲೆಗಳನ್ನು ಸಿದ್ಧಪಡಿಸಿ ಮಂಜೂರಾತಿಗಾಗಿ ಕೋಲಾರ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿಯವರಿಗೆ ತಾರೀಕು ೨೧-೧೧-೧೯೮೫ರಂದು (ನಂಬರ್ ಎಲ್ ಅಂಡ್ ಡಿ (ಸಿ) ೮೪-೮೫) ಕಳುಹಿಸಿರುವುದು ನಿಜವೆ ? ಹಾಗಿದ್ದಲ್ಲಿ ಈ ಬಗ್ಗೆ ಇದುವರೆವಿಗೂ ಏನೂ ಕ್ರಮವನ್ನು ಕೈಗೊಳ್ಳದಿರಲು ಕಾರಣ ಏನು ಮತ್ತು ಇದಕ್ಕೆ ಜವಾಬ್ದಾರರಾದ ಅಧಿಕಾರಿಗಳು ಯಾರು ಹಾಗೂ ಅವರ ವಿರುದ್ಧ ಸರ್ಕಾರದವರು ಕೈಗೊಳ್ಳುವ ಕ್ರಮ ಏನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು) —

ಅ) ಬಂಗಾರು ಪೇಟೆಯಲ್ಲಿರುವ ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದವರು ಬಂಗಾರಪೇಟೆ ತಾಲ್ಲೂಕು ಕಸಬಾ ಹೋಬಳಿ ದೊಡ್ಡ ಅಂಕಂಡಹಳ್ಳಿ ಗ್ರಾಮದ ಸರ್ವೆ ನಂ. ೩೯ರಲ್ಲಿ ೧೦ ಎಕರೆ ಜಮೀನಿನ ಮಂಜೂರಾತಿಗೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ.

ಆ) ಮೇಲ್ಕಂಡ ಪ್ರಶ್ನೆ (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.